# <u>ಅಪ್ಪಪ್ಪಾ ನೀ ನೋಡಪ್ಪ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these lyrics.

ರಾಗ: ಆನಂದ ಭೈರವಿ ತಾಳ: ಆದಿ

ಅಪ್ಪಪ್ಪಾ ನೀ ನೋಡಪ್ಪ ಮೈಯೆಲ್ಲವು ಕೇಸರಪ್ಪ
ಕಪ್ಪು ಬಡಿವುದೇನಪ್ಪ ತೊಳೆವೆನೊ ನೀ ಬಾರಪ್ಪ || ಪ ||

ಬಾರಪ್ಪ ನೀ ಬಾರಪ್ಪ ಭಾರ ಹೊರುವುದೇನಪ್ಪ
ಭಾರವೆಲ್ಲ ನಿನದಪ್ಪಾ ಸುರರ ಕಾವ ಎನ್ನಪ್ಪ || 1 ||

ಎನ್ನಪ್ಪ ಎನ್ನಪ್ಪ ಮೋರೆ ಸೊಟ್ಟ ಯಾಕಪ್ಪ
ಕಾನನ ಗಡ್ಡೆ ಬೇಡಪ್ಪ ಒಪ್ಪರ ಬೇರ ತಿನ್ನಪ್ಪ || 2 ||

ತಿನ್ನಪ್ಪ ತಿನ್ನಪ್ಪ ಭಕ್ತಿ ರಸದ ಹಣ್ಣಪ್ಪ
ಸುಣ್ಣವ ನೀಡುವನಪ್ಪ ತೆರೆದ ಬಾಯ ತೋರಪ್ಪ || 3 ||

ತೋರಪ್ಪ ನೀ ತೋರಪ್ಪ ಮುದ್ದು ರೂಪವ ತೋರಪ್ಪ
ಇಂದ್ರ ಪದವ ನೀಡಪ್ಪ ಬಲಿಗೆ ಕಾವಲಾಗಪ್ಪ || 4 ||

ಆಗಪ್ಪ ಭೃಗು ರಾಮಪ್ಪ ವನಚರನು ಆಗಪ್ಪ
ಭಾಗವತ ಭರತನಪ್ಪ ಪಾದುಕೆ ಅವಗೆ ನೀಡಪ್ಪ || 5 ||

ನೀಡಪ್ಪ ನೀ ನೀಡಪ್ಪ ಹೆಣ್ಣ ಅವಗೆ ನೀಡಪ್ಪ
ಬಡವನಾದರೇನಪ್ಪ ಸೋದರ ಅಳಿಯನು ಬಿಡನಪ್ಪ || 6 ||

ಬಿಡೆನಪ್ಪ ಬಿಡೆನಪ್ಪ ನಿನ್ನ ಚರಣವ ಬಿಡೆನಪ್ಪ

ಕಡಿವಾಣವ ಪಿಡಿಯಪ್ಪ ಪಾರ್ಥಗೆ ಸಾರಥ್ಯ ಮಾಡಪ್ಪ || 7 ||

ಮಾಡಪ್ಪ ನೀ ಮಾಡಪ್ಪ ಮೋಹ ಶಾಸ್ತ್ರವ ಕಲಿಸಪ್ಪ
ದಿಟ್ಟ ತೇಜಿಯನೇರಪ್ಪ ತಂದೆ ಪುರಂದರ ವಿಠ್ಠಲಪ್ಪ || 8 ||

**Classification:** Mundige
**Ankita:** tande purandara vittala
**Location:** NA
**Category:** dashavatara,
**Sub-Category:** kappu, sura, kaadu, hannu, bhakti, bhagavata, bayi, indra, bali, hennu, badava, shastra, kudure, dashavatara,
**Pravachana:** NA
**Explanation:** NA